ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (106)151
ಸದಸ್ಯರ ಹೆಸರು : ಶ್ರೀ ಶ್ರೀಕಾಂತ್ ಕುಲಕರ್ಣಿ.
ಉತ್ತರಿಸುವ ಸಚಿವರು : (ಶ್ರೀ ಬಸವರಾಜ್ ಬೊಮ್ಮಾಯಿ)
ಜಲ ಸಂಪನ್ಮೂಲ ಸಚಿವರು

ಅ) ಜಮಖಂಡಿ ತಾಲ್ಲೂಕಿನ ಹಿರೇಪಡಸಲಗಿ ಹಾಗೂ ನಾಗನೂರು ಹಾಗೂ ಬೀಳಗಿ ತಾಲೂಕಿನ ಕುಂದರಗಿ, ಗಿರಿಸಾಗರ ಹಾಗೂ ಬಾವಲತ್ತಿ ಗ್ರಾಮಗಳು ಕೃಷ್ಣಾ ಹಾಗೂ ಘಟಪ್ರಭಾ ನದಿಯ ನೀರಿನಿಂದ ಸುತ್ತುವರಿಯಲ್ಪಟ್ಟು, ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಬಂದಿದೆ.

ಆ) ಹಾಗಿದ್ದಲ್ಲಿ, ಸಾರ್ವಜನಿಕರ ಪುನರ್ ವಸತಿಯ ಬಗ್ಗೆ ಸರ್ಕಾರ ಕೈಗೊಂಡ ಯೋಜನೆಗಳೇನು;

ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಆರ್.ಎಲ್. 521.00 ಮೀ.ವರೆಗಿನ ಜಮೀನು ಮತ್ತು ಕಟ್ಟಡಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ. ಸದರಿ ಜಮಖಂಡಿ ತಾಲೂಕಿನ ಹಿರೇಪಡಸಲಗಿ ಮತ್ತು ನಾಗನೂರ ಹಾಗೂ ಬೀಳಗಿ ತಾಲೂಕಿನ ಕುಂದರಗಿ, ಗಿರಿಸಾಗರ ಮತ್ತು ಬಾವಲತ್ತಿ ಗ್ರಾಮಗಳು ಎಫ್.ಆರ್.ಎಲ್. 523 ರಡಿಯಲ್ಲಿ ಬರುತ್ತಿರುವುದರಿಂದ ಪುನರ್ ವಸತಿ ಕಲ್ಪಸುವ ಪ್ರಸ್ತಾವನೆ ಇರುವುದಿಲ್ಲ.

ಇ) ಈ ಗ್ರಾಮಗಳ ಕಟ್ಟಡಗಳ ಪರಿಹಾರ ಧನವನ್ನು ಸರ್ಕಾರವು ಸಾರ್ವಜನಿಕರಿಗೆ ತಲುಪಿಸುವುದಕ್ಕೆ ಸಮಯವನ್ನೇನಾದರೂ ನಿಗಧಿಪಡಿಸಿಕೊಂಡಿವೆಯೆ?

ಉದ್ಭವಿಸುವುದಿಲ್ಲ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (263)152
2. ಸದಸ್ಯರ ಹೆಸರು : ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್
3. ಉತ್ತರಿಸುವ ಸಚಿವರು : (ಶ್ರೀ ಬಸವರಾಜ್ ಬೊಮ್ಮಾಯಿ) ಜಲಸಂಪನ್ಮೂಲ ಸಚಿವರು

ಅ) ಅಥಣಿ ತಾಲೂಕಿನ ಹಲ್ಯಾಳ ಹತ್ತಿರ ಕೃಷ್ಣಾ ನದಿಯಿಂದ ಮಾಡಲಾಗುತ್ತಿರುವ ಏತ ನೀರಾವರಿ ಯೋಜನೆಯಿಂದ ಜಮಖಂಡಿ ತಾಲೂಕಿನ ಸಾವಳಗಿ ಭಾಗದ ಬರಗಾಲ ಪೀಡಿತ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?